**ಸಿವಿಲ್ ಜಡ್ಜ ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಯವರ ನ್ಯಾಯಾಲಯ, ಮುಂಡಗೋಡ.**

**ಸಿ.ಸಿ.ನಂಃ 230/2021**

**ಫಿರ್ಯಾದುದಾರರು** ಸರಕಾರದ ಪರವಾಗಿ, ಮುಂಡಗೋಡ ಪೋಲಿಸ್ ಠಾಣೆ,
ಮುಂಡಗೋಡ.

**– ವಿರುದ್ಧ –**

**ಆರೋಪಿತರು** ಕೃಷ್ಣಪ್ಪ @ ಕಿಟ್ಯಾ ತಂದೆ ಲಚ್ಚಪ್ಪ ಲಮಾಣಿ
ವರ್ಷ, ಕೂಲಿ ಕೆಲಸ,
ಸಾಃ ಕಮಲಾನಗರ ತಾಂಡಾ,
ತಡಸ, ತಾಃ ಶಿಗ್ಗಾಂವ, ಜಿಲ್ಲಾಃ ಹಾವೇರಿ.

**ಃ ದೋಷಾರೋಪಣೆ ಃ**

ಶ್ರೀಮತಿ. ಧನವತಿ. ಬಿ.ಎ.,(ಲಾ)ಎಲ್ಎಲ್‌ಬಿ., ಸಿವಿಲ್ ಜಡ್ಜ ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿ, ಮುಂಡಗೊಂಡ ಆದ ನಾನು, ಆರೋಪಿತರಾದ ನಿಮ್ಮ ಮೇಲೆ ಹೊರಿಸುವ ದೋಷಾರೋಪಣೆ ಏನೆಂದರೆಃ–

ದಿನಾಂಕಃ 19–10–2020 ರಂದು ಬೆಳಗಿನ ಜಾವ 01–30 ಗಂಟೆಗೆ ಮುಂಡಗೋಡ ಪೋಲಿಸ ಠಾಣಾ ಸರಹದ್ದಿನಲ್ಲಿ ಬರುವ ಮುಂಡಗೋಡ ತಾಲೂಕ ಮೈನಳ್ಳಿ ಗ್ರಾಮ ಪಂಚಾಯತಿ ವ್ಯಾಪ್ತಿಗೆ ಒಳಪಡುವ ಮೈನಳ್ಳಿ ಗ್ರಾಮದಲ್ಲಿ ಆರೋಪಿತರಾದ ನೀವು ಕಳ್ಳತನ ಮಾಡುವ ಉದ್ದೇಶ ಹೊಂದಿ ರಾತ್ರಿ ಹೊತ್ತು ಫಿರ್ಯಾದಿಯಾದ ಕಾತುನಬಿ ನಾನಾಸಾಬ ಸಿದ್ದಿ ರವರ ಮನೆ ನಂ.5/1 ನೇದರ ಮನೆಯ ಹಿಂದಿನ ಬಾಗಿಲಿನ ಚಿಲಕವನ್ನು ತೆಗೆದು ಮನೆಯ ಒಳಗೆ ಅಕ್ರಮವಾಗಿ ಪ್ರವೇಶ ಮಾಡಿದ್ದೀರಿ, ಆ ಮೂಲಕ ಭಾರತೀಯ ದಂಡ ಸಂಹಿತೆ ಕಲಂ 457 ರಡಿಯಲ್ಲಿ ಶಿಕ್ಷಾರ್ಹವಾದ ಅಪರಾಧ ಎಸಗಿದ್ದೀರಿ ಎಂದು ಅಪಾದಿಸಲಾಗಿದೆ.

ಎರಡನೆಯದಾಗಿ ಅದೇ ದಿನಾಂಕ, ಅದೇ ಸಮಯದಲ್ಲಿ ಮತ್ತು ಅದೇ ಸ್ಥಳದಲ್ಲಿ ಮನೆಯ ಒಳಗೆ ಅಕ್ರಮವಾಗಿ ಪ್ರವೇಶಿಸಿ ವಿದ್ಯುತ್ ದೀಪದ ಬಲ್ಬನ್ನು ತೆಗೆದು ಮನೆಯ ಒಳಗಿನ ಕೋಣೆಯಲ್ಲಿನ ತಿಜೋರಿಯ ಒಳಗಿನ ಲಾಕರಿನಲ್ಲಿ ಇಟ್ಟಿದ್ದ 01 ಗ್ರಾಂ 540 ಮೀ.ಗ್ರಾಂ.ಚಿಕ್ಕ ಮಕ್ಕಳು ಧರಿಸುವ ಬಂಗಾರದ ತಾಯಿತ ಕಳ್ಳತನ ಮಾಡಿಕೊಂಡು ಹೋಗಿ, ಆ ಮೂಲಕ ಭಾರತೀಯ ದಂಡ ಸಂಹಿತೆ ಕಲಂ 380 ರಡಿಯಲ್ಲಿ ಶಿಕ್ಷಾರ್ಹವಾದ ಅಪರಾಧ ಎಸಗಿದ್ದೀರಿ ಎಂದು ಆಪಾದಿಸಲಾಗಿದೆ.

ಮೇಲೆ ಹೇಳಲಾದ ಆಪಾದನೆ ಈ ನ್ಯಾಯಾಲಯದ ಅಧಿಕಾರ ವ್ಯಾಪ್ತಿಯಲ್ಲಿ ಬರುವುದರಿಂದ ಅದರ ವಿಚಾರಣೆ ಆಗಬೇಕೆಂದು ನಾನು ನಿರ್ದೇಶಿಸಿದ್ದೇನೆ.

(ಶ್ರೀಮತಿ.ಧನವತಿ)

ದಿನಾಂಕಃ 30–05–2023. ಸಿವಿಲ್ ಜಡ್ಜ ಮತ್ತು ಪ್ರ. ದ. ನ್ಯಾಯಿಕ ದಂಡಾಧಿಕಾರಿ,
ಮುಂಡಗೋಡ

**ಸಿವಿಲ್ ಜಡ್ಜ ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಯವರ ನ್ಯಾಯಾಲಯ, ಮುಂಡಗೋಡ.**

**ಸಿ.ಸಿ.ನಂಃ 230/2021**

**ಫಿರ್ಯಾದುದಾರರು** ಸರಕಾರದ ಪರವಾಗಿ, ಮುಂಡಗೋಡ ಪೋಲಿಸ್ ಠಾಣೆ,
ಮುಂಡಗೋಡ.

**– ವಿರುದ್ಧ –**

**ಆರೋಪಿತರು** ಕೃಷ್ಣಪ್ಪ @ ಕಿಟ್ಯಾ ತಂದೆ ಲಚ್ಚಪ್ಪ ಲಮಾಣಿ
ವರ್ಷ, ಕೂಲಿ ಕೆಲಸ,
ಸಾಃ ಕಮಲಾನಗರ ತಾಂಡಾ,
ತಡಸ, ತಾಃ ಶಿಗ್ಗಾಂವ, ಜಿಲ್ಲಾಃ ಹಾವೇರಿ.

**: ಆರೋಪಣೆ :**

ಪ್ರಶ್ನೆ–1ಃ ಮೇಲೆ ಓದಿ ಹೇಳಿದ ದೋಷಾರೋಪಣೆಯನ್ನು ಕೇಳಿ ತಿಳಿದುಕೊಂಡಿದ್ದೀರಾ ?

ಉತ್ತರ –

ಪ್ರಶ್ನೆ–2ಃ ತಪ್ಪೊಪ್ಪಿಕೊಳ್ಳುವಿರೋ ಅಥವಾ ವಿಚಾರಣೆಯಾಗಬೇಕೆನ್ನುವಿರೋ ?

ಉತ್ತರ –

(ಆರೋಪಿತರಿಗೆ ತಿಳಿದಿರುವ ಭಾಷೆಯಲ್ಲಿ ಈ ದೋಷಾರೋಪಣೆಯನ್ನು ಓದಿ ತಿಳಿಸಿ ಹೇಳಲಾಗಿ ಸದ್ರಿ ಆರೋಪಿತರು ಹೇಳಿದ ಉತ್ತರಗಳನ್ನು ಯಥಾವತ್ತಾಗಿ ಬರೆದುಕೊಳ್ಳಲಾಯಿತೆಂದು ದೃಢೀಕರಿಸಿರುತ್ತೇನೆ.)

ದಿಃ 30–05–2023.

ಸಿವಿಲ್ ಜಡ್ಜ ಮತ್ತು ಪ್ರ. ದ. ನ್ಯಾಯಿಕ ದಂಡಾಧಿಕಾರಿ,
ಮುಂಡಗೋಡ